ಕರ್ನಾಟಕ ಸರ್ಕಾರ

## ಆಯುಕ್ತಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,

ಆರೋಗ್ಯ ಸೌಧ, ಮಾಗಡಿರಸ್ತೆ, ಬೆಂಗಳೂರು –560023.

ದೂರವಾಣಿ ಸಂ:080–29603636 ಇ–ಮೆಲ್: spmbeckar@gmail.com

ಸಂ: ಡಿ.ಹೆಚ್.ಎಸ್/ಬಿ.ಇ.ಸಿ/51/2021–22 ದಿನಾಂಕ: 14.01.2022

## ಅಧಿಕೃತಜ್ಞಾಪನ ಪತ್ರ

**ವಿಷಯ:** ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ/ಡಿಪ್ಲೋಮಾ ವ್ಯಾಸಂಗ ಪೂರ್ಣಗೊಳಿಸಿ ಅನ್‌ಲೈನ್ ಸಮಾಲೋಚನೆಯಲ್ಲಿ ಭಾಗವಹಿಸಿ ದಾಖಲೆಗಳನ್ನು ಸರಿಯಾಗಿ ದಾಖಲಿಸದ/upload ಮಾಡದ ಅಭ್ಯರ್ಥಿಗಳಿಗೆ ಸಮಾಲೋಚನೆ ನಡೆಸಿ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಕಾಯ್ದೆ ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ 2012 (2015 ರ ಕರ್ನಾಟಕ ಅಧಿನಿಯಮ ಸಂ: 26) ತಿದ್ದುಪಡಿ ಕಾಯ್ದೆ 35/2017.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 249 ಹೆಚ್‌ಎಸ್ ಹೆಚ್2015, ದಿನಾಂಕ: 24.07.2015.
3. ಆಯುಕ್ತಾಲಯದ ಅಧಿಸೂಚನೆ ಸಂ: ಡಿಹೆಚ್‌ಎಸ್/ಬಿಇಸಿ/51/2021–22, ದಿನಾಂಕ: 08.12.2021. ಮತ್ತು 10.01.2022.

*******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, 2018–19ನೇ ಸಾಲಿಗೆ ಸ್ನಾತಕೋತ್ತರ ಪದವಿ/ಡಿಪ್ಲೋಮಾ ವ್ಯಾಸಂಗಕ್ಕೆ ವೈದ್ಯಕೀಯ ಮಹಾವಿದ್ಯಾಲಯ, ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆದು, 2021–22ನೇ ಶೈಕ್ಷಣಿಕ ಸಾಲಿನಲ್ಲಿ ಉತ್ತೀರ್ಣರಾಗಿರುವ ಸ್ನಾತಕೋತ್ತರ ಪದವಿ/ಡಿಪ್ಲೋಮಾ ವೈದ್ಯರಿಗೆ ಉಲ್ಲೇಖ (1) ರ ಅಧಿನಿಯಮ 4 ರಂತೆ ಹಾಗೂ ಉಲ್ಲೇಖ (2) ರ ನಿಯಮ 7 ಉಪನಿಯಮ (1) (2) (3) ಮತ್ತು (4)ರಂತೆ ಅನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡು ಖಾಲಿ ಹುದ್ದೆಗಳಿಗೆ ಆಧ್ಯತೆಯನುಸಾರ ಸ್ಥಳ ಆಯ್ಕೆಮಾಡಿಕೊಳ್ಳಲು ಹಾಗೂ ಸಮಾಲೋಚನೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡಲಾಗಿತ್ತು. ಅದರಂತೆ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ ಸಲ್ಲಿಸುವ ಸ್ನಾತಕೋತ್ತರ ಪದವಿ/ಡಿಪ್ಲೋಮಾ ವ್ಯಾಸಂಗ ಪೂರ್ಣಗೊಳಿಸಿ ಅನ್‌ಲೈನ್ ಸಮಾಲೋಚನೆಯಲ್ಲಿ ಭಾಗವಹಿಸಿ ಸರಿಯಾದ ದಾಖಲೆಗಳನ್ನು ಅಪ್‌ಲೋಡ್ ಮಾಡದೇ ಇರುವ ಹಾಗೂ ಅಧ್ಯತೆ ನೀಡಿದ ಸ್ಥಳ ಸಿಗದೇ (ಕಡಿಮೆ ಅಂಕದಿಂದ) ಇರುವ ಅಭ್ಯರ್ಥಿಗಳಿಗೆ ಸಮಾಲೋಚನೆ ನಡೆಸಿ ಸ್ಥಳ ನಿಯುಕ್ತಿಗೊಳಿಸುವ ಸಂಬಂಧ ಉಲ್ಲೇಖಿತ ಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ದಿನಾಂಕ: 13.01.2022 ರಂದು ಅಭ್ಯರ್ಥಿಗಳು ಸಮಾಲೋಚನೆಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಂಡಿರುತ್ತಾರೆ.

ಅದರಂತೆ ಒಂದು ವರ್ಷದ ಅವಧಿಯ ಕಡ್ಡಾಯ ಸರ್ಕಾರಿ ಸೇವೆಗೆ ನೇಮಿಸಿ ನಗರ ಪ್ರದೇಶಗಳಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ನಿಯುಕ್ತಿಗೊಳಿಸಿರುವ ಸ್ನಾತಕೋತ್ತರ ಪದವಿ/ಡಿಪ್ಲೋಮಾ ಅಭ್ಯರ್ಥಿಗಳ ಪಟ್ಟಿಯನ್ನು ಈ ಪತ್ರದೊಂದಿಗೆ **ಅನುಬಂಧ–1** ರಲ್ಲಿ ಲಗತ್ತಿಸಿದೆ.

ಅ) ಈ ಅಧಿಕೃತ ಜ್ಞಾಪನಾ ಪತ್ರದಂತೆ ಒಂದು ವರ್ಷದ ಅವಧಿಯ ಕಡ್ಡಾಯ ಸರ್ಕಾರಿ ಸೇವೆಗೆ ನೇಮಿಸಿ ನಿಯುಕ್ತಿಗೊಳಿಸಿರುವ ಸ್ನಾತಕೋತ್ತರ ಪದವಿ/ಡಿಪ್ಲೋಮಾ ಅಭ್ಯರ್ಥಿಗಳು ಈ ಆದೇಶದ ದಿನಾಂಕದಿಂದ 7 ದಿನದೊಳಗಾಗಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಉಲ್ಲೇಖ (1) ರ ನಿಯಮ 4 (1) ರ ಪ್ರಕಾರ ಈಗಾಗಲೇ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ ಸಲ್ಲಿಸಿದ್ದಲ್ಲಿ/ನಿಯಮಾನುಸಾರ ವಿನಾಯಿತಿ ಪಡೆದಿದ್ದಲ್ಲಿ ಹಾಗೂ ಪೂರ್ಣದಂಡ ಪಾವತಿಸಿದಲ್ಲಿ, ಸೂಕ್ತ ದಾಖಲೆಯನ್ನು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬಂಧಪತ್ರ ಕೋಶ ವಿಭಾಗಕ್ಕೆ ವೈಯಕ್ತಿಕವಾಗಿ ದಾಖಲೆಗಳನ್ನು ಸಲ್ಲಿಸುವುದು ಅಥವಾ spmbeckar@gmail.com ಗೆ ಇ–ಮೇಲ್ ಮುಖಾಂತರ ಸೂಕ್ತ ನಿರ್ಧಾರಕ್ಕೆ ಕಳುಹಿಸುವುದು.

ಆ) ಈ ಆದೇಶಾನುಸಾರ ಸಂಬಂಧಿಸಿದ ವೈದ್ಯಕೀಯ ಕಾಲೇಜುಗಳ ಡೀನ್ ಮತ್ತು ನಿರ್ದೇಶಕರು/ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಸದರಿ ವೈದ್ಯರನ್ನು ವರದಿ ಮಾಡಿಸಿಕೊಂಡು ಸ್ಥಳ ನಿಯುಕ್ತಿಗೊಳಿಸಿರುವ ಸ್ಥಳಕ್ಕೆ ಚಲನಾದೇಶ ನೀಡಿ ಕಳುಹಿಸಲು ಹಾಗೂ ಸ್ನಾತಕೋತ್ತರ ಪದವಿ/ಡಿಪ್ಲೋಮಾ ವೈದ್ಯರುಗಳ ಮಾಹಿತಿಯನ್ನು ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕು.ಕ. ಸೇವೆಗಳು ಹಾಗೂ ವೈದ್ಯಕೀಯ ಕಾಲೇಜುಗಳಿಗೆ ನೇಮಕವಾಗುವ ಅಭ್ಯರ್ಥಿಗಳಿಗೆ ಸದರಿ ಕಾಲೇಜುಗಳ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು ಇವರಿಗೆ ಅನುದಾನದ ಬೇಡಿಕೆಯನ್ನು ಸಲ್ಲಿಸಿ ಸಮಯಕ್ಕೆ ಸರಿಯಾಗಿ ವೇತನ ಪಾವತಿಸಲು ಕ್ರಮಕೈಗೊಳ್ಳುವುದು. ಒಂದು ವೇಳೆ ಸದರಿ ನಿಯೋಜಿಸಿದ ಸ್ಥಳದಲ್ಲಿ ಗುತ್ತಿಗೆ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಲ್ಲಿ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ಕಡ್ಡಾಯ ಸರ್ಕಾರಿ ಸೇವೆಗೆ ಹಾಜರಾಗಿರುವ ವೈದ್ಯರನ್ನು ಕರ್ತವ್ಯಕ್ಕೆ ವರದಿ ಮಾಡಿಸಿಕೊಂಡು ನೇಮಿಸಲಾದ ಸರ್ಕಾರಿ ಆರೋಗ್ಯ ಸಂಸ್ಥೆಯಲ್ಲಿ ಕರ್ತವ್ಯನಿರ್ವಹಿಸಲು ಚಲನಾದೇಶ ನೀಡುವುದು.

**ಇತರೆ ಷರತ್ತುಗಳು:**

1. ಈ ಸ್ಥಳ ನಿಯುಕ್ತಿಯನ್ನು ಮೇಲೆ ಉಲ್ಲೇಖಿಸಿದಂತೆ ಕೇವಲ ಒಂದು ವರ್ಷದ ಅವಧಿಗೆ ಮಾತ್ರ ಮಾಡಲಾಗಿದ್ದು, ಯಾವುದೇ ಕಾರಣಕ್ಕೂ ಇದನ್ನೇ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಮಾಡಲಾದ ಖಾಯಂ ನೇಮಕಾತಿಯೆಂದು ಭಾವಿಸತಕ್ಕದ್ದಲ್ಲ. ಮುಂದುವರೆದು, ಈ ನೇಮಕಾತಿಯು ಯಾವುದೇ ರೂಪದಲ್ಲಿಯೂ ಸಂಬಂಧಿಸಿದ ಅಭ್ಯರ್ಥಿಗೆ, ಇಲಾಖೆಯಲ್ಲಿ ಖಾಯಂ ಆಗಿ ನೇಮಕಗೊಳ್ಳುವಂತಹ ಹಕ್ಕನ್ನು ಸ್ಥಾಪಿಸಲು ಅವಕಾಶವಿರುವುದಿಲ್ಲ.

2. ನಿಯುಕ್ತಿಗೊಂಡಿರುವ ಅವಧಿಯು, ಈ ಆದೇಶದನ್ವಯ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಒಂದು ವರ್ಷದ ಅವಧಿಗೆ ಮಾತ್ರ ಇರುತ್ತದೆ.

3. ಒಂದು ವರ್ಷದ ನಿಯುಕ್ತಿಯ ಅವಧಿಯಲ್ಲಿ, ವೈದ್ಯರು ಗೈರು ಹಾಜರಾದಲ್ಲಿ ಅಥವಾ ಯಾವುದೇ ಅವಧಿಗೆ ವೇತನರಹಿತ ರಜೆಯನ್ನು ಪಡೆದುಕೊಂಡಲ್ಲಿ ಆ ಪ್ರಮಾಣದ ಅವಧಿಗೆ ಸದರಿಯವರ ನಿಯುಕ್ತಿ ಅವಧಿಯು ಸ್ವಯಂಚಾಲಿತವಾಗಿ ಮುಂದುವರಿಯಲ್ಪಡುತ್ತದೆ.

4. ಒಂದು ವರ್ಷದ ಕಡ್ಡಾಯ ಸರ್ಕಾರಿ ಸೇವೆಗೆ ಒಳಪಟ್ಟ ಪ್ರತಿಯೊಬ್ಬ ಅಭ್ಯರ್ಥಿಗೆ ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಧಿನಿಯಮ 2012 ರಂತೆ ನಿಗಧಿಪಡಿಸಿರುವ ವೇತನವನ್ನು ಪಾವತಿಸುವುದು.

    a) ವೈದ್ಯಕೀಯ ಶಿಕ್ಷಣ ಇಲಾಖೆಯ ಆಸ್ಪತ್ರೆಗಳು/ಸಂಸ್ಥೆಗಳಿಗೆ ಸ್ಥಳ ನಿಯಕ್ತಿಗೊಂಡಿರುವ ಸ್ನಾತಕೋತ್ತರ ಪದವಿ/ಡಿಪ್ಲೋಮಾ ಅಭ್ಯರ್ಥಿಗಳಿಗೆ ಆಯಾ ಆಸ್ಪತ್ರೆ/ಸಂಸ್ಥೆಯಿಂದಲೇ ವೇತನ ಪಾವತಿಸುವುದು ಹಾಗೂ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ವೇತನ ಪಾವತಿಯ ಮೇಲು ಉಸ್ತುವಾರಿ ವಹಿಸಿಕೊಳ್ಳುವುದು.

    b) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಜಿಲ್ಲಾ ಆಸ್ಪತ್ರೆಗಳಿಗೆ ನೇಮಕವಾದ ಸ್ನಾತಕೋತ್ತರ ಪದವಿ/ಡಿಪ್ಲೋಮಾ ಅಭ್ಯರ್ಥಿಗಳಿಗೆ ಆರೋಗ್ಯ ಇಲಾಖೆಯಿಂದ ವೇತನ ಪಾವತಿಸಲಾಗುವುದು ಹಾಗೂ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕು.ಕ. ಸೇವೆಗಳು ವೇತನ ಪಾವತಿಯ ಮೇಲು ಉಸ್ತುವಾರಿ ವಹಿಸಿಕೊಳ್ಳುವುದು.

5. ಸರ್ಕಾರದ ಕರ್ತವ್ಯವನ್ನು ನಿರ್ವಹಿಸಲು ಪ್ರಯಾಣಿಸಿದಾಗ, ಕೆ.ಸಿ.ಎಸ್.ಆರ್ ನಿಯಮಗಳನುಸಾರ ಪ್ರಯಾಣ ಭತ್ಯೆಗೆ ಅರ್ಹರಾಗುವರು. ಆದಾಗ್ಯೂ, ಈ ಆದೇಶಾನುಸಾರ ಪ್ರಥಮ ಬಾರಿಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸ್ವ–ಸ್ಥಳದಿಂದ ಮಾಡುವ ಪ್ರಯಾಣಕ್ಕೆ ಯಾವುದೇ ಪ್ರಯಾಣ ಭತ್ಯೆಗೆಅರ್ಹರಾಗುವುದಿಲ್ಲ.

6. ಸದರಿ ಸ್ನಾತಕೋತ್ತರ ಪದವಿ/ಡಿಪ್ಲೋಮಾ ವೈದ್ಯರು, ತಮಗೆ ಸ್ಥಳ ನಿಯುಕ್ತಿಗೊಳಿಸಲಾದ ಸರ್ಕಾರಿ ಆಸ್ಪತ್ರೆಗಳಲ್ಲಿ ಅಧಿಕೃತ ಕೆಲಸದ ಸಮಯದಲ್ಲಿ ಆಡಳಿತ ವೈದ್ಯಾಧಿಕಾರಿಗಳ ಸಲಹೆ ಮಾರ್ಗದರ್ಶನದ ಮೇರೆಗೆಕರ್ತವ್ಯ ನಿರ್ವಹಿಸತಕ್ಕದ್ದು. ಸದರಿ ವೈದ್ಯರು ಯಾವುದೇ ಮೆಡಿಕೋ–ಲೀಗಲ್(Medico Legal) ಪ್ರಕರಣಗಳನ್ನು ನಿರ್ವಹಿಸತಕ್ಕದ್ದಲ್ಲ. ಮಿಕ್ಕಂತೆ, ತಮಗೆ ನೇಮಿಸಲಾದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವೈದ್ಯಕೀಯ ಪ್ರಕರಣಗಳ ಜವಾಬ್ದಾರಿಯನ್ನು ನಿರ್ವಹಿಸತಕ್ಕದ್ದು.